# ವಾರ್ಡ್ ಸಭೆ ಸಂಖ್ಯೆ.35

ದಿನಾಂಕ:.04.06.2022 ರಂದು ಸಮಯ 11:00 ಗಂಟೆಗೆ ವಾರ್ಡ್.ಸಂಖ್ಯೆ.44 ಮಾರಪ್ಪನಪಾಳ್ಯ ವಾರ್ಡ್ ಕಛೇರಿಯಲ್ಲಿ ವಾರ್ಡ್ ಕಮಿಟಿ ಸಭೆಯನ್ನು ಮಾನ್ಯ ನೋಡಲ್ ಅಧಿಕಾರಿ (ಅಧ್ಯಕ್ಷರು) ರವರ ಅಧ್ಯಕ್ಷತೆಯಲ್ಲಿ ಕರೆಯಲಾಗಿತ್ತು.

ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳು

1. ಶ್ರೀ ಧನಂಜಯ ಜಿ.ಟಿ ಸಹಾಯಕ ಅಭಿಯಂತರರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ. (ಕಾರ್ಯದರ್ಶಿ)
2. ಶ್ರೀ ವೈ.ಆರ್ ವೆಂಕಟೇಶ್ ಸದಸ್ಯರು.
3. ಶ್ರೀ ನಂಜೇಗೌಡ ಬಿ.ವಿ ಸದಸ್ಯರು.
4. ಶ್ರೀ ರಾಜೇಶ್ ಸದಸ್ಯರು.
5. ಶ್ರೀ ಗೋಪಿ ಸದಸ್ಯರು.
6. ಡಾ॥ ಶ್ರೀ ಶಶಿಕುಮಾರ್ ಎಸ್.ಆರ್ ಆರೋಗ್ಯ ವೈದ್ಯಾಧಿಕಾರಿಗಳು ಶಂಕರನಗರ ಪ್ರಾಥಮಿಕ ಆರೋಗ್ಯ ಕೇಂದ್ರ.
7. ಶ್ರೀ ಪ್ರದೀಪ್‌ಕುಮಾರ್ ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ.
8. ಶ್ರೀ ಛಾಯಪತಿ ಎಂ ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ.
9. ಶ್ರೀ ದಿನೇಶ್ ಕುಮಾರ್ ಸಹಾಯಕ ಅಭಿಯಂತರರು (ಬೆಸ್ಕಾಂ) ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ.
10. ಶ್ರೀ ನಿಂಗರಾಜ ಎನ್ ಕಂದಾಯ ಪರಿವೀಕ್ಷಕರು ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ
11. ಶ್ರೀ ವಿನೋದ್ ಎಸ್ ಮಾರ್ಷಲ್ ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ.

ಕಾರ್ಯದರ್ಶಿ ರವರು ಸಭೆಯಲ್ಲಿ ಹಾಜರಿದ್ದ ಸದಸ್ಯರನ್ನು, ಅಧಿಕಾರಿಗಳನ್ನು ಹಾಗೂ ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಲಾಯಿತು.

| ಕ್ರ. ಸಂ | ವಿವರಣೆ | ಕ್ರಮ |
|---|---|---|
| 1. | ಅಧ್ಯಕ್ಷರು ಹಿಂದಿನ ಸಭೆಯ ನಡವಳಿಗಳನ್ನು ಸಭೆಯಲ್ಲಿ ಹಾಜರಿದ್ದ ಸದಸ್ಯರಿಗೆ, ಅಧಿಕಾರಿಗಳಿಗೆ ಓದಿ ತಿಳಿಸಿದರು. | - |
| 2. | ಕಾರ್ಯದರ್ಶಿಗಳು ಸಾರ್ವಜನಿಕರ ಸಮಸ್ಯೆಗಳಿಗೆ ಮೊದಲ ಆದ್ಯತೆ ನೀಡಿ ಸಮಸ್ಯೆಯನ್ನು ತಿಳಿಸುವಂತೆ ಸಾರ್ವಜನಿಕರನ್ನು ಕೋರಿದರು. | - |
| 3. | ಸಾರ್ವಜನಿಕರು ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ದೀಪಗಳು, ಐ ಮಾಸ್ಟ್‌ಗಳು, ಸಿಸಿ ಕ್ಯಾಮರಗಳ ಕಾರ್ಯ ನಿರ್ವಹಿಸುವ ಬಗ್ಗೆ ಮಾಹಿತಿ ಕೋರಿದರು. ಇದಕ್ಕೆ ಕಾರ್ಯದರ್ಶಿಗಳು ಎಲ್ಲಾ ವಿಷಯಗಳಿಗೆ ಉತ್ತರ ನೀಡಿದರು. | - |
| 4. | ಸಾರ್ವಜನಿಕರು 6ನೇ ಮುಖ್ಯರಸ್ತೆ ಶ್ರೀಕಂಠೇಶ್ವರನಗರದ ರಸ್ತೆಯಲ್ಲಿ ಮರಗಳಿಗೆ ಈ ಹಿಂದೆ ಟ್ರೀ ಗಾರ್ಡ್ ಅಳವಡಿಸಲಾಗಿರುತ್ತದೆ ಆದರೆ ಈ ಮರಗಳು ಬೆಳೆದುಕೊಂಡಿರುವುದರಿಂದ ಸದರಿ ಟ್ರೀ ಗಾರ್ಡ್‌ಗಳನ್ನು ತೆರವುಗೊಳಿಸಲು ಕೋರಿದರು. ಇದಕ್ಕೆ ಕಾರ್ಯದರ್ಶಿಗಳು ಸ್ಥಳಪರಿಶೀಲಿಸಿ ತೆರವುಗೊಳಿಸಲಾಗುವುದು ಎಂದು ತಿಳಿಸಿದರು. | - |
| 5. | ಸಾರ್ವಜನಿಕರು ಕಸದ ವಿಲೇವಾರಿ ವಾಹನಗಳನ್ನು ಸರ್ಕಾರಿ ಜಾಗದ ಆವರಣದಲ್ಲಿ ನಿಲ್ಲಿಸಿಕೊಳ್ಳಲು ಕೋರಿದರು. ಇದಕ್ಕೆ ಕಾರ್ಯದರ್ಶಿಗಳು ಈ ಬಗ್ಗೆ ಬಿಬಿಎಂಪಿ ವ್ಯಾಪ್ತಿಯಲ್ಲಿ ಚರ್ಚಿಸಲಾಗುತ್ತಿದೆ ಎಂದು ತಿಳಿಸಿದರು. | - |
| 6. | ಸಾರ್ವಜನಿಕರು ಶಂಕರನಗರದ ಮುಖ್ಯರಸ್ತೆಯ ಮನೆ ನಂ.64 ರ ಹತ್ತಿರ ಸ್ಯಾನಿಟರಿ ಸಂಪರ್ಕ ಕಲ್ಪಿಸಿಕೊಳ್ಳದೆ ಇರುವುದರಿಂದ ರಸ್ತೆಯಲ್ಲಿ ಪಿಟ್ ಅಗೆದು ಸದರಿ ಪಿಟ್‌ಗೆ ಸ್ಯಾನಿಟರಿ ತ್ಯಾಜ್ಯವನ್ನು ಬಿಡುತ್ತಿರುತ್ತಾರೆ ಎಂದು ತಿಳಿಸಿದರು. ಇದಕ್ಕೆ ಕಾರ್ಯದರ್ಶಿಗಳು ಸ್ಥಳಕ್ಕೆ ಬೇಟಿ ನೀಡಿ ಸ್ಥಳ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. | - |
| 7. | ದಿನಾಂಕ:20.05.2020 ರಂದು ಶುಕ್ರವಾರ ದಂದು ಸ್ಥಳೀಯ ಶಾಸಕರು ಆದ ಮಾನ್ಯ ಶ್ರೀ ಕೆ. ಗೋಪಾಲಯ್ಯ ರವರು ವಿಜಯಾನಂದನಗರ 4ನೇ ಮುಖ್ಯರಸ್ತೆಯಲ್ಲಿ ಸ್ಯಾನಿಟರಿ ಲೈನ್ ಹಾಳಾಗಿ ಮಳೆ ನೀರು ಎಲ್ಲಾ ಮನೆಗಳಲ್ಲಿ ಒಳಗೆ ಹೋಗಿರುವುದು ನೋಡೊ ಸ್ಯಾನಿಟರಿ ಲೈನ್ ಸರಿಪಡಿಸಲು ಸೂಚಿಸಿದರು. ಇದಕ್ಕೆ ಶ್ರೀ ಸೋಮನಾಥ್ ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) ರವರು ವಿಜಯಾನಂದನಗರದ ವ್ಯಾಪ್ತಿಯ ಸ್ಯಾನಿಟರಿ ಲೈನ್ ಬದಲಾಯಿಸಲು ಅಂದಾಜುಪಟ್ಟಿಯನ್ನು ಸಲ್ಲಿಸಲಾಗಿರುತ್ತದೆ. ಈಗ ತಾತ್ಕಾಲಿಕವಾಗಿ ಸಮಸ್ಯೆಯನ್ನು ಪರಿಹರಿಸಲು ಕ್ರಮ ಕೈಗೊಳ್ಳುತ್ತೇನೆ ಎಂದು ತಿಳಿಸಿರುತ್ತಾರೆ. ಆದರೆ ಇದರ ಬಗ್ಗ ಮಾಹಿತಿ ನೀಡಲು ಸಂಬಂದಪಟ್ಟವರು ಸಭೆಗೆ ಹಾಜರಿರಲಿಲ್ಲ. | ಬಿ.ಡಬ್ಲ್ಯೂ.ಎಸ್. ಎಸ್.ಬಿ ಇಲಾಖೆ |
| 8. | ಕಾರ್ಯದರ್ಶಿಗಳು ಕೋವಿಡ್‌ಗೆ ಸಂಬಂಧಿಸಿದ ಮಾಹಿತಿ ಕೋರಿದರು ಇದಕ್ಕೆ ಡಾ॥ ಶ್ರೀ ಶಶಿಕುಮಾರ್ ರವರು ಮಾಹಿತಿಯನ್ನು ನೀಡಿದರು. | ಆರೋಗ್ಯ ವೈದ್ಯಾಧಿಕಾರಿಗಳು |

| | | |
|---|---|---|
| 9. | ಡಾ॥ ಶ್ರೀ ಶಶಿಕುಮಾರ್ ರವರು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ದಿನನಿತ್ಯ 21 ತರಹದ ರಕ್ತ ಪರೀಕ್ಷೆಗಳನ್ನು ಮಾಡಲಾಗುತ್ತಿರುತ್ತದೆ ಹಾಗೂ ಆರೋಗ್ಯ ಕೇಂದ್ರದಲ್ಲಿರುವ ಸೌಲಭ್ಯಗಳ ಬಗ್ಗೆ ವಾರ್ಡ್ ಕಮಿಟಿ ವಾಟ್ಸ್‌ಅಪ್ ಗ್ರೂಪ್‌ಗೆ ಕಳುಹಿಸಲಾಗಿದೆ ಎಂದು ತಿಳಿಸಿದರು. | ಆರೋಗ್ಯ ವೈದ್ಯಾಧಿಕಾರಿಗಳು |
| 10. | ಡಾ॥ ಶ್ರೀ ಶಶಿಕುಮಾರ್ ರವರು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ನಾಯಿ ಕಡಿತಕ್ಕೆ ನೀಡುವ ಔಷದಿ ಪ್ರಸ್ತುತ ಲಭ್ಯವಿಲ್ಲ ಎಂದು ತಿಳಿಸಿದರು. | ಆರೋಗ್ಯ ವೈದ್ಯಾಧಿಕಾರಿಗಳು |
| 11. | ಡಾ॥ ಶ್ರೀ ಶಶಿಕುಮಾರ್ ರವರು ಗೌತಮನಗರದಲ್ಲಿ 15ನೇ ವರ್ಷದ ಹುಡುಗಿ ಗರ್ಭಿಣಿಯಾಗಿರುವುದು ಗಮನಕ್ಕೆ ಬಂದಿರುತ್ತದೆ. ಇದು ಕಾನೂನು ಬಾಹಿರವಾಗಿರುವುದರಿಂದ ಸರ್ಕಾರದ ಮಾರ್ಗ ಸೂಚಿಯಂತೆ ಸಂಬಂದಪಟ್ಟವರಿಗೆ ದೂರು ನೀಡಲಾಗಿರುತ್ತದೆ ಹಾಗೂ ಗರ್ಭಿಣಿಗೆ ಚಿಕಿತ್ಸೆಯನ್ನು ನೀಡಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು. | ಆರೋಗ್ಯ ವೈದ್ಯಾಧಿಕಾರಿಗಳು |
| 12. | ಡಾ॥ ಶ್ರೀ ಶಶಿಕುಮಾರ್ ರವರು ಈ ವಾರದಲ್ಲಿ 34 ಜನರಿಗೆ ಟಿ.ಬಿ ಪರೀಕ್ಷೆ ಮಾಡಲಾಗಿರುತ್ತದೆ ಇದರಲ್ಲಿ ಒಬ್ಬರಿಗೆ ಮಾತ್ರ ಟಿ.ಬಿ ಪಾಸಿಟೀವ್ ಬಂದಿರುತ್ತದೆ ಹಾಗೂ ಸದರಿ ಟಿ.ಬಿ ರೋಗಿಗೆ ನಮ್ಮ ಆರೋಗ್ಯ ಕೇಂದ್ರದಿಂದ ಚಿಕಿತ್ಸೆ ನೀಡಲಾಗುತ್ತಿದೆ ಎಂದು ತಿಳಿಸಿದರು. | ಆರೋಗ್ಯ ವೈದ್ಯಾಧಿಕಾರಿಗಳು |
| 13. | ಸಾರ್ವಜನಿಕರು ಶಂಕರನಗರದಲ್ಲಿ ಎಲ್ ಅಂಡ್ ಟಿ ರವರು ವಾಟರ್ ಲೈನ್ ನವೀಕರಣ ಮಾಡಿರುತ್ತಾರೆ. ಅದೇರೀತಿ ಶಂಕರನಗರ ಮುಖ್ಯರಸ್ತೆಯಲ್ಲಿ ಸಹ ನವೀಕರಣ ಮಾಡಿಸಿಕೊಡಲು ಕೋರಿದರು. | – |
| 14. | ಶ್ರೀ ಗೋಪಿ ಸದಸ್ಯರು ಅರಣ್ಯಾ ಇಲಾಖೆ ವತಿಯಿಂದ ಉಚಿತವಾಗಿ ಗಿಡಗಳು ನೀಡಿತ್ತಿರುತ್ತಾರೆ ಆದ್ದರಿಂದ ನಮ್ಮ ವಾರ್ಡ್ ವ್ಯಾಪ್ತಿಯಲ್ಲಿ ತಂದು ಹಂಚಲು ಕೋರಿದರು. ಇದಕ್ಕೆ ಕಾರ್ಯದರ್ಶಿಗಳು ಅರಣ್ಯ ಇಲಾಖೆಯ ಸಂಬಂಧಪಟ್ಟ ಅಧಿಕಾರಿಗಳನ್ನು ಮುಂದಿನ ಸಭೆಗೆ ಕರೆಯಲಾಗುವುದು ಎಂದು ಸಭೆಗೆ ತಿಳಿಸಿದರು. | – |
| 15. | ಶ್ರೀ ಕಾರ್ಯದರ್ಶಿಗಳು ಅಂತಿಮವಾಗಿ ಸಭೆಗೆ ಹಾಜರಿದ್ದ ಸದಸ್ಯರು, ಅಧಿಕಾರಿಗಳು ಮತ್ತು ಸಾರ್ವಜನಿಕರಿಗೆ ವಂದನೆಗಳು ಹೇಳುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು. | – |

ಕಾರ್ಯದರ್ಶಿ

4/6/22

ವಾರ್ಡ್ ಕಮಿಟಿ, ವಾರ್ಡ್ ಸಂಖ್ಯೆ.44
ಮಾರಪ್ಪನಪಾಳ್ಯ